ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪ್ರಕಟಣೆ/2022

ದಿನಾಂಕ: 25-11-2022

## ಪ್ರಕಟಣೆ

ಈಗಾಗಲೇ ವೆರಿಫಿಕೇಶನ್ ಸ್ಲಿಪ್ ಡೌನ್‌ಲೋಡ್ ಮಾಡಿ ಮೊದಲನೇ ಸುತ್ತು ಹಾಗು ಎರಡನೇ ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆ ಮಾಡಿಕೊಂಡಿರುವವರು ಅಥವಾ ವೆರಿಫಿಕೇಶನ್ ಸ್ಲಿಪ್ ಡೌನ್‌ಲೋಡ್ ಮಾಡಿ ಸೀಟು ಹಂಚಿಕೆಯಾಗದವರು ದಿನಾಂಕ 26-11-2022 ರಂದು ಯಾವುದೇ ದಾಖಲೆಗಳ ಮರು ಪರಿಶೀಲನೆಗಾಗಿ ಅಥವಾ ಮೀಸಲಾತಿ ಕ್ಲೇಮ್ ಮಾಡಲು ಹಾಜರಾಗಲು ಅರ್ಹತೆ ಪಡೆಯುವುದಿಲ್ಲ. ಅಂತಹ ಅಭ್ಯರ್ಥಿಗಳ ದಾಖಲೆಗಳ ಮರುಪರಿಶೀಲನೆಗೆ ಪುರಸ್ಕರಿಸುವುದಿಲ್ಲ.

ಪ್ರಾಧಿಕಾರದಲ್ಲಿ ಈಗಾಗಲೆ ಆಫ್‌ಲೈನ್ ಪರಿಶೀಲನೆಗೆ ಹಾಜರಾದವರೂ ಸಹ 26-11-2022 ರಂದು ಮರು ಪರಿಶೀಲನೆಗೆ ಹಾಜರಾಗಲು ಅರ್ಹತೆ ಪಡೆಯುವುದಿಲ್ಲ.

ಯುಜಿಸಿಇಟಿ 2022 ರಲ್ಲಿ ರ್‍ಯಾಂಕ್ ಪಡೆದು ವೆರಿಫಿಕೇಶನ್ ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳು ಮಾತ್ರ ಅಂದರೆ ನಿಗದಿತ ದಿನಾಂಕಗಳಂದು ಬಿಇಒ ಕಚೇರಿಯಲ್ಲಿ ವ್ಯಾಸಂಗ ಪ್ರಮಾಣ ಪತ್ರ ಪರಿಶೀಲನೆಗೆ ಹಾಜರಾಗದಿರುವವರು ಮಾತ್ರ, ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯಲ್ಲಿ ಲಭ್ಯವಾಗುವ ಸೀಟುಗಳಿಗೆ ಅರ್ಹತೆ ಪಡೆಯುವುದಕ್ಕಾಗಿ ಇಷ್ಟವಿದ್ದಲ್ಲಿ ಎಲ್ಲಾ ಅಗತ್ಯ ಮೂಲ ದಾಖಲೆಗಳೊಂದಿಗೆ ದಾಖಲೆಗಳ ಪರಿಶೀಲನೆಗೆ ಹಾಜರಾಗಬಹುದು.

ಪೂರಕ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ದಿನಾಂಕ 26-11-2022 ರಂದು ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in